# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಆಗಸ್ಟ್ 2018**, ಬೆಂಗಳೂರು, ಸಂಪುಟ 4, ಸಂಚಿಕೆ 4, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ

Kannada monthly, **10 August 2018**, Bangaluru, Vol. 4, No.4, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-

ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.

**ಧಮ್ಮ ಪದಗಳು**

ಪಮಾದಂ ಅಪ್ಪಮಾದೇನ, ಯದಾ ನುದತಿ ಪಂಡಿತೋ;
ಪನ್ನಾಪಾಸಾದಮಾರುಯ್ಹ, ಅಸೋಕೋ ಸೋಕಿನಿಂ ಪಜಂ;
ಪಬ್ಬತಟ್ಠೋವ ಭುಮ್ಮಟ್ಠೇ, ಧೀರೋ ಬಾಲೇ ಅವೇಕ್ಖತಿ.

ಜ್ಞಾನಿಯು, ಗಮನವಿಲ್ಲದಿರುವಿಕೆಯನ್ನು ತೊಡೆದುಹಾಕಿ, ಸದಾ ಎಚ್ಚರಿಕೆಯಿಂದಿದ್ದು, ಶೋಕವಿಲ್ಲದವನಾಗಿ, ಜ್ಞಾನಶಿಖರವನ್ನೇರಿ ಅಲ್ಲಿಂದ, ಎತ್ತರದ ಪರ್ವತ ಶಿಖರವನ್ನೇರಿದವನು ಭೂಮಿಯ ಮೇಲಿರುವುದನ್ನು ಕಾಣುವ ಹಾಗೆ, ಶೋಕದಿಂದ ನರಳುವವರನ್ನು ಕಾಣುತ್ತಾನೆ.

**ಧಮ್ಮಪದ – 28, ಅಪ್ಪಮಾದವಗ್ಗೋ.**

# ಬುದ್ಧರ ಅನಂತ ಸಹನೆ ಮತ್ತು ಕರುಣೆ

**ಪ್ರಧಾನ ಆಚಾರ್ಯ ಎಸ್.ಎನ್. ಗೋಯಂಕ (1924–2013)**

(ಏಪ್ರಿಲ್ 2012ರ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ.)

ಲೆಕ್ಕವಿಲ್ಲದಷ್ಟು ಬಿರುಗಾಳಿ, ಮಳೆ, ಮಂಜನ್ನು ಎದುರಿಸಿದರೂ ಹಿಮಾಲಯ ಪರ್ವತ ಯಾವಾಗಲೂ ಅಲ್ಲಾಡುವುದಿಲ್ಲ. ಬುದ್ಧರ ಸಹನೆಯೂ ಈ ಹಿಮಾಲಯ ಪರ್ವತದಂತೆ. ಅಗಾಧವಾದ ಸಾಗರದಂತೆ. ಎಷ್ಟೇ ನೀರನ್ನು ಹೊರ ತೆಗೆದರೂ ಅದರ ನೀರು ಹೇಗೆ ಕಡಿಮೆಯಾಗುವುದಿಲ್ಲವೋ ಹಾಗೆಯೇ ಬುದ್ಧರ ಪ್ರೀತಿತುಂಬಿದ ಕರುಣೆ ಮತ್ತು ಅನುಕಂಪ. ತಮ್ಮ ಜೀವಿತಕಾಲದಲ್ಲಿ ಬುದ್ಧರು, ರೋಷಾವೇಷದ ಅನೇಕ ಆಪಾದನೆ ಮತ್ತು ನಿಂದನೆಗಳನ್ನು ಎದುರಿಸಿದರು. ಆದರೆ ಅವರ ಸಹನೆ ಅಚಲವಾಗಿತ್ತು. ಈ ಸುಳ್ಳು ಆಪಾದನೆಗಳನ್ನು ಮಾಡುವವರ ಮೇಲಿನ ಅವರ ಅಪರಿಮಿತ ಪ್ರೀತಿ ತುಂಬಿದ ಕರುಣೆ ಕಿಂಚಿತ್ತೂ ಕಡಿಮೆಯಾಗಲಿಲ್ಲ.

### (1) ಮಗಧದ ನಾಗರಿಕರ ನಿಂದನೆ.

ಬೌದ್ಧ ಭಿಕ್ಖುಗಳನ್ನು ನೋಡಿ ಅನೇಕ ನಾಗರೀಕರು ಬುದ್ಧರನ್ನು ಈ ಮುಂದಿನ ಮಾತುಗಳಿಂದ ನಿಂದಿಸಿದರು:

"ಈ ಸಮಣನು(ಶ್ರಮಣ= ಸಂನ್ಯಾಸಿ. ಬುದ್ಧರ ಅನುಯಾಯಿಗಳಲ್ಲದವರು ಅವರನ್ನು ಸಮಣ ಗೋತಮ ಎಂದು ಕರೆಯುತ್ತಿದ್ದರು.) ಮಗಧವನ್ನು ಮಕ್ಕಳಿಲ್ಲದ ನೆಲವನ್ನಾಗಿ ಮಾಡುತ್ತಿದ್ದಾನೆ. ಹೆಣ್ಣುಮಕ್ಕಳನ್ನು ವಿಧವೆಯರನ್ನಾಗಿ ಮಾಡುತ್ತಿದ್ದಾನೆ. ಅವನು ನಮ್ಮ ವಂಶವನ್ನೇ ನಾಶ ಮಾಡತೊಡಗಿದ್ದಾನೆ. ಅವನು ಈಗತಾನೇ ನಮ್ಮ ಜಾತಿಯ ಸಾವಿರಾರು ಸಂನ್ಯಾಸಿಗಳನ್ನು ತನ್ನ ಶಿಷ್ಯರನ್ನಾಗಿ ಪರಿವರ್ತಿಸಿದ್ದಾನೆ. ಆ ನಂತರ ಒಂದು ಸಾವಿರದ ಇನ್ನೂರೈವತ್ತು ಪರಿವ್ರಾಜಕರನ್ನು (ಪರಿವ್ರಾಜಕ=ಒಂದು ಕಡೆಯಲ್ಲಿ ನಿಲ್ಲದ ಸಂನ್ಯಾಸಿ) ತನ್ನ ಗುಂಪಿಗೆ ಸೇರಿಸಿಕೊಂಡಿದ್ದಾನೆ.

ಈಗ, ಮಗಧದ ಹೆಸರಾಂತ ಕುಟುಂಬಗಳ ಮಕ್ಕಳೂ ಅವನ ಬೋಧನೆಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ."

ಭಿಕ್ಖುಗಳಿಗೆ ಈ ಮುಂದಿನ ತರಹದ ಕೊಂಕು ಮಾತುಗಳನ್ನೂ ಆಡುತ್ತಿದ್ದರು.

"ಈ ಮಹಾ–ಶ್ರಮಣ ಗೌತಮನು ಮಗಧದ ಗಿರಿವ್ರಾಜ(ರಾಜಗೃಹ)ಕ್ಕೆ ಬಂದಿದ್ದಾನೆ. ಈಗಾಗಲೇ ಅವನು ಬಹಳಷ್ಟು ಜನರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಂಡಿದ್ದಾನೆ. ಇನ್ನೆಷ್ಟು ಜನರು ಅವನ ಬಲೆಗೆ ಬೀಳುತ್ತಾರೋ ಯಾರಿಗೆ ಗೊತ್ತು?"

ಈ ರೀತಿಯ ಟೀಕೆಗಳನ್ನು ಬುದ್ಧರು ತಮ್ಮ ಭಿಕ್ಖುಗಳ ಮುಖಾಂತರ ತಿಳಿದು ಕೊಂಡಾಗ ಅವರು ಹೇಳಿದರು:

"ಭಿಕ್ಖುಗಳೇ! ಅಂತಹ ಕೊಂಕು ಮಾತುಗಳನ್ನು ನೀವು ಬಹಳ ಕಾಲ ಕೇಳುವುದಿಲ್ಲ. ಒಂದು ವಾರ ಜನಗಳು ಆ ರೀತಿ ಮಾತಾಡುತ್ತಾರೆ. ನಂತರ ತಮ್ಮಷ್ಟಕ್ಕೆ ತಾವೇ ಸುಮ್ಮನಾಗುತ್ತಾರೆ."

### (2) ಸುಪ್ರಿಯ ಪರಿವ್ರಾಜಕನ ನಿಂದನೆ.

ಬುದ್ಧರು ಒಮ್ಮೆ ಕೆಲವು ಭಿಕ್ಖುಗಳ ಜೊತೆಗೆ ರಾಜಗಿರಿಯಿಂದ ನಳಂದಕ್ಕೆ ಹೋಗುತ್ತಿದ್ದರು. ಆ ಸಮಯದಲ್ಲಿ, ಸುಪ್ರಿಯ ಪರಿವ್ರಾಜಕ ಮತ್ತು ಅವನ ಶಿಷ್ಯ, ಬ್ರಹ್ಮದತ್ತ ಮಾನವ, ಅವರೂ ಸಹ ಬುದ್ಧರ ಹಿಂದೆ ಹೋಗುತ್ತಿದ್ದರು. ಸುಪ್ರಿಯ ಪರಿವ್ರಾಜಕನು ಬುದ್ಧ, ಧಮ್ಮ ಮತ್ತು ಸಂಘವನ್ನು ದಾರಿಯುದ್ದಕ್ಕೂ ತೆಗಳುತ್ತಿದ್ದ. ಆದರೆ ಅವನ ಶಿಷ್ಯ, ಬ್ರಹ್ಮದತ್ತ ಮಾನವ, ಬುದ್ಧ, ಧಮ್ಮ ಮತ್ತು ಸಂಘವನ್ನು ವಿವಿಧ ರೀತಿಯಲ್ಲಿ ಹೊಗಳುತ್ತಿದ್ದ. ರಾತ್ರಿ ಎಲ್ಲರೂ ಒಂದೇ ಸ್ಥಳದಲ್ಲಿ ತಂಗಿದ್ದರು. ರಾತ್ರಿಯಿಡೀ ಅದೇ ತೆರನಾಗಿ ಬುದ್ಧ, ಧಮ್ಮ ಮತ್ತು ಸಂಘವನ್ನು ಗುರುಗಳು ಬೈಯ್ಯುವುದನ್ನು ಶಿಷ್ಯನು ಹೊಗಳುವುದನ್ನು ಮುಂದುವರಿಸಿದರು. ಬುದ್ಧರ ಶಿಷ್ಯರು ಇವರ ಚರ್ಚೆಯನ್ನು ರಾತ್ರಿಯಲ್ಲಾ ಸುಮ್ಮನೆ ಕೇಳಿಸಿಕೊಂಡರು. ಬುದ್ಧರು ಇದನ್ನು ಮೆಚ್ಚಿಕೊಂಡು, "ಯಾರಾದರೂ ಹೊಗಳಿದಾಗ ವ್ಯಕ್ತಿಯು ಸಂತೋಷಪಡಬಾರದು ಮತ್ತು ತೆಗಳಿದಾಗ ತಳಮಳಗೊಳ್ಳಬಾರದು" ಎಂದು ಹೇಳಿದರು.

### (3) ನಿಗ್ರೋಧ ಪರಿವ್ರಾಜಕನ ನಿಂದನೆ

ಬುದ್ಧರನ್ನು ನಿಂದಿಸುತ್ತಾ ಅವನು ಈ ರೀತಿ ಹೇಳಿದ: "ಶೂನ್ಯಾಗಾರದಲ್ಲಿ ಧ್ಯಾನ ಮಾಡುತ್ತಾ, ಶ್ರಮಣ ಗೌತಮ ತನ್ನ ಬುದ್ಧಿಯನ್ನು ಕಳೆದುಕೊಂಡಿದ್ದಾನೆ. ಅವನ ವಿವೇಕ ಅವನತಿ ಹೊಂದಿದೆ. ನನ್ನ ಯಾವುದೇ ಪ್ರಶ್ನೆಗೆ ಅವನು ಉತ್ತರಿಸಲು ಸಾಧ್ಯವಿಲ್ಲ."

ಆದರೆ ಅವನು ವಾಸ್ತವವಾಗಿ ಬುದ್ಧರನ್ನು ಸಂಧಿಸಿದಾಗ, ಅವರ ಶಾಂತಿ ಮತ್ತು ವಿವೇಕವನ್ನು ಕಂಡು ತಲೆಬಾಗಿ ನಮಸ್ಕರಿಸಿದ.

### (4) ಆಕ್ರೋಶಕ ಬ್ರಾಹ್ಮಣನ ನಿಂದನೆ

ಕೋಪದಿಂದ ಕುದಿಯುತ್ತಾ ಬುದ್ಧರ ಹತ್ತಿರ ಬಂದು ಅವರನ್ನು ನಿಂದಿಸತೊಡಗಿದ.

ಇದನ್ನು ಕೇಳಿ ಬುದ್ಧರು ಹೇಳಿದರು. " ಈ ರೀತಿಯ ಬೈಗುಳ, ಒಬ್ಬರಿಗೊಬ್ಬರು ಸವಿ ತಿನಿಸು ಕೊಟ್ಟಂತೆ. ಈ ಕೆಲಸದಲ್ಲಿ ನಾನು ನಿನ್ನ ಜೊತೆ ಸೇರುವುದಿಲ್ಲ. ನೀನು ಈ ಬೈಗುಳದ ಕೊಡುಗೆಯನ್ನು ನನಗೆ ನೀಡಿದ್ದೀಯ. ಆದರೆ ಆ ಕೊಡುಗೆಗಳು ನಿನ್ನ ಬಳಿಯೇ ಉಳಿದಿವೆ.

ನಾನು ಅವುಗಳನ್ನು ಸ್ವೀಕರಿಸಿಲ್ಲ ಮತ್ತು ಅದಕ್ಕೆ ಪ್ರತಿಯಾಗಿ ನಾನು ನಿನಗೆ ಬೈಗುಳದ ಕೊಡುಗೆಯನ್ನೂ ಕೊಟ್ಟಿಲ್ಲ. ನಿನ್ನ ಕೊಡುಗೆಗಳು ನಿನ್ನ ಬಳಿಯೇ ಉಳಿದಿವೆ."

ಕೋಪಿಷ್ಠನಾಗಿದ್ದರೂ ಸಹ, ಆಕ್ರೋಶಕ ಭಾರದ್ವಜನು ಬಹಳ ಬುದ್ಧಿವಂತನಾಗಿದ್ದ. ತಕ್ಷಣ ಅವನು ಗುರುತಿಸಿದ, ಹಗಲೂ–ರಾತ್ರಿ ನಾವು ಒಬ್ಬರಿಗೊಬ್ಬರು ಬೈಗುಳದ ಕೊಡುಗೆಗಳನ್ನು ನೀಡುತ್ತಿರುತ್ತೇವೆ. ಆದರೆ ಈ ವ್ಯಕ್ತಿಯು ಆ ರೀತಿಯ ಕೊಡುಗೆಗಳನ್ನು ಸ್ವೀಕರಿಸುವುದಿಲ್ಲ. ಅದಕ್ಕೆ ಬದಲಾಗಿ ಅವನು ಸಹನೆಯಿಂದ ಮೌನವಾಗಿರುತ್ತಾನೆ, ಸಂಪೂರ್ಣವಾಗಿ ಶಾಂತಿ ಮತ್ತು ಸಮಾಧಾನದಿಂದಿರುತ್ತಾನೆ. ಇದನ್ನು ನೋಡಿ ಮತ್ತು ಅರ್ಥಮಾಡಿಕೊಂಡು, ಅವನು ಬುದ್ಧರ ಕಟ್ಟಾ ಶಿಷ್ಯನಾದ.

### (5) ಅಗ್ಗಿಕ ಭಾರದ್ವಜನ ನಿಂದನೆ

ಭಿಕ್ಷೆಯನ್ನು ಅರಸುತ್ತಾ ಮನೆಯಿಂದ ಮನೆಗೆ ಹೋಗುತ್ತಿದ್ದಾಗ, ಬುದ್ಧರು ಅಗ್ಗಿಕ ಭಾರದ್ವಜನ ಮನೆ ಮುಂದೆ ಬಂದರು. ಬುದ್ಧರನ್ನು ನೋಡಿ ಕೂಗುತ್ತಾ, ಅಗ್ಗಿಕ ಭಾರದ್ವಜನು ತನ್ನ ತಿರಸ್ಕಾರವನ್ನು ಈ ರೀತಿ ಹೊರಹಾಕಿದ: "ಹೇ ಬೋಳು ತಲೆಯವನೇ, ಅಲ್ಲೇ ನಿಲ್ಲು! ಹೇ ಶ್ರಮಣ, ಅಲ್ಲೇ ನಿಲ್ಲು! ಹೇ ಜಾತಿಭ್ರಷ್ಟ, ಅಲ್ಲೇ ನಿಲ್ಲು! ಕೆಳಜಾತಿಗೆ ಸೇರಿದ ವ್ಯಕ್ತಿಯ ನೆರಳು ಅಮಂಗಳಕರ. ಅದು ನನ್ನ ಮನೆಯ ಮೇಲೆ ಬೀಳಬಾರದು" ಎಂದು ಅವನು ಕೂಗಿದ.

ಇದನ್ನು ಕೇಳಿದ ಬುದ್ಧ, ಜಾತಿಭ್ರಷ್ಟ ಯಾರು ಮತ್ತು ಯಾವುದು ವ್ಯಕ್ತಿಯನ್ನು ಜಾತಿಭ್ರಷ್ಟನನ್ನಾಗಿ ಮಾಡುತ್ತದೆ ಎಂಬುದನ್ನು ವಿವರಿಸಿದರು. ಕರುಣಾಮಯಿ ಬುದ್ಧರಿಂದ ಈ ವಿವರಣೆಯನ್ನು ಕೇಳಿದ ಬ್ರಾಹ್ಮಣ ಭಾರದ್ವಜನು ಅವರ ವಿಧೇಯ ವಿದ್ಯಾರ್ಥಿಯಾದ.

### (6) ಮಾಗಂಡಿಯ ಪರಿವ್ರಾಜಕನ ನಿಂದನೆ

ಬುದ್ಧ ಉಪಯೋಗಿಸಿದ ಆಸನವನ್ನು ನೋಡಿದಾಗ ಮಾಗಂಡಿಯ ಪರಿವ್ರಾಜಕ ಈ ರೀತಿ ಟೀಕಿಸಿದ.

"ಓ, ಬುದ್ಧ ಕುಳಿತ ಆಸನವನ್ನು ನಾನು ನೋಡಿದೆ. ಇದು ಬಹಳ ಅಮಂಗಳಕರ. ಏಕೆಂದರೆ, ಶ್ರಮಣ ಗೌತಮನು ಭ್ರೂಣ ಹತ್ಯೆಮಾಡುವವನು." ಇಂತಹ ಕಠೋರ ಟೀಕೆಗಳನ್ನು ಕೇಳಿದಾಗಲೂ ವಿಚಲಿತರಾಗದೆ ಸಮಾಧಾನದಿಂದ ಬುದ್ಧ ಇದ್ದರು.

### (7) ಸಿಂಘ ಸೇನಾಪತಿಯ ನಿಂದನೆ

ಒಮ್ಮೆ ಸಿಂಘ ಸೇನಾಪತಿಯು ಬುದ್ಧನು ಯಾವುದೇ ಅತೀಂದ್ರಿಯ ಶಕ್ತಿಯನ್ನು ಹೊಂದಿಲ್ಲ ಎಂದು ದೋಷಾರೋಪ ಮಾಡಿದ. ತನ್ನ ಬೋಧನೆಗಳು ಅತೀಂದ್ರಿಯ ಶಕ್ತಿಯನ್ನು ಪ್ರದರ್ಶಿಸುವುದಕ್ಕಲ್ಲ, ದುಃಖದಿಂದ ಸಂಪೂರ್ಣ ಮುಕ್ತಿಗಾಗಿ ಇವೆ ಎಂದು ಬುದ್ಧ ವಿವರಿಸಿದರು. ಇದನ್ನು ಕೇಳಿ, ಸರಿಯಾದ ರೀತಿಯಿಂದ ಅರ್ಥಮಾಡಿಕೊಂಡು ಅವನು ಬುದ್ಧರ ಶ್ರದ್ಧಾವಂತ ಶಿಷ್ಯನಾದನು.

### (8) ಚಿಂಚ ಮಾಣವಿಕಳ ನಿಂದನೆ

ಗರ್ಭಿಣಿ ಹೆಂಗಸಿನ ತರಹ ವೇಷ ಹಾಕಿಕೊಂಡು, ಬುದ್ಧ ಬೋಧಿಸುತ್ತಿದ್ದ ಜಾಗಕ್ಕೆ ಬಂದು ಚಿಂಚಳು ಬುದ್ಧರನ್ನು ನಿಂದಿಸತೊಡಗಿದಳು.

"ಓ ಮಹಾ ಸಂನ್ಯಾಸಿಯೇ ನನ್ನ ಮಾತನ್ನು ಕೇಳಿಸಿಕೊ. ನನ್ನ ಗರ್ಭದಲ್ಲಿರುವ ನಿನ್ನ ಮಗುವಿನ ಜನನಕ್ಕೆ ವ್ಯವಸ್ಥೆ ಮಾಡಲು ನಿನಗೆ ಸಾಧ್ಯವಾಗದಿದ್ದರೆ, ನಿನ್ನ ಯಾರಾದರೂ ಒಬ್ಬ ಶ್ರೀಮಂತ ಶಿಷ್ಯನನ್ನು ಸಹಾಯ ಮಾಡಲು ಕೇಳು."

ಈ ಸುಳ್ಳು ಆಪಾದನೆಯನ್ನು ಕೇಳಿದ ಬುದ್ಧ ಪ್ರಶಾಂತವಾಗಿ ಹೇಳಿದರು.

"ತಂಗಿ, ನಿನ್ನ ಹೇಳಿಕೆಯ ಸತ್ಯ ಅಥವಾ ಅಸತ್ಯ ನಮ್ಮಿಬ್ಬರಿಗೆ ತಿಳಿದಿದೆ." ಈ ಮಾತನ್ನು ಕೇಳಿದ ನಂತರವೂ ಚಿಂಚ ತನ್ನ ಆಪಾದನೆಯನ್ನು ಪದೇ ಪದೇ ಪುನರುಚ್ಚರಿಸಿದಳು. ಆದರೆ ಅವಳ ಆಪಾದನೆ ಬುದ್ಧರ ಮೇಲೆ ಯಾವುದೇ ಪರಿಣಾಮ ಬೀರದಿರುವುದನ್ನು ಕಂಡು ಅವಳು ಗೊಂದಲಕ್ಕೊಳಗಾದಳು. ಮರದ ತುಂಡನ್ನು ಹೊಟ್ಟೆಗೆ ಕಟ್ಟಿದ್ದ ದಾರ ಸಡಿಲವಾಗಿ ಮರದ ತುಂಡು ಕೆಳಗೆ ಬಿದ್ದು ಸತ್ಯ ತಿಳಿಯಿತು. ಅಲ್ಲಿ ಉಪಸ್ಥಿತರಿದ್ದ ಜನರು ಆಕೆಯನ್ನು ದೂಷಿಸಿದರು. ಆದರೆ ಬುದ್ಧರು ವಿಚಲಿತರಾಗದೆ ಪ್ರಶಾಂತವಾಗಿದ್ದರು.

### (9) ಸುಂದರಿ ಪರಿವ್ರಾಜಕಳನ್ನು ಕೊಂದ ಆಪಾದನೆ

ಯಾವುದೇ ರೀತಿಯಿಂದಲೂ ಬುದ್ಧರಿಗೆ ಅಪಖ್ಯಾತಿ ತರಲು ಅವರ ಶತ್ರುಗಳಿಗೆ ಸಾಧ್ಯವಾಗದಿದ್ದಾಗ, ಮತ್ತೊಂದು ಕುತಂತ್ರ ಮಾಡಿದರು. ಸುಂದರಿ ಪರಿವ್ರಾಜಕಳನ್ನು ಜೇತವನಕ್ಕೆ ತೆಗೆದುಕೊಂಡು ಹೋಗಿ ಒಂದು ನಿರ್ಜನ ಪ್ರದೇಶದಲ್ಲಿ ಅವಳನ್ನು ಕೊಂದರು. ನಂತರ ಅವಳ ಹೆಣವನ್ನು ಪಟ್ಟಣಕ್ಕೆ ತೆಗೆದುಕೊಂಡು ಹೋಗಿ, "ಬುದ್ಧನ ಶಿಷ್ಯರು ನಡತೆಗೆಟ್ಟವರಷ್ಟೇ ಅಲ್ಲ, ಅವರು ಕೊಲೆಗಡುಕರೂ ಹೌದು" ಎಂದು ಅಪಪ್ರಚಾರ ಮಾಡಿದರು. ಇದನ್ನು ಕೇಳಿದ ಬುದ್ಧರು, ಈ ಸುಳ್ಳು ಆಪಾದನೆ ಒಂದು ವಾರಕ್ಕಿಂತ ಜಾಸ್ತಿಯಿರುವುದಿಲ್ಲ, ಶಾಂತಿಯಿಂದಿರಿ ಎಂದು ಭಿಕ್ಖುಗಳಿಗೆ ಸೂಚಿಸಿದರು. ಅದು ಬುದ್ಧರು ಹೇಳಿದಂತೆಯೇ ಆಯಿತು. ಭಿಕ್ಖುಗಳು ಶಾಂತತೆಯನ್ನು ಕಾಪಾಡಿಕೊಂಡರು. ಸಮಯ ಕಳೆದಂತೆ ಸತ್ಯವು ಹೊರಬಂದಿತು.

### (10) ಸಾರಿಪುತ್ತನ ಬೆನ್ನಿಗೆ ಗುದ್ದಿದ್ದು

ಸಾರಿಪುತ್ತನಿಗೆ ಏನು ಮಾಡಿದರೂ, ಅವನನ್ನು ಕೋಪಗೊಳ್ಳುವಂತೆ ಮಾಡಲು ಸಾಧ್ಯವಿಲ್ಲ ಎಂಬುದು ಜನಜನಿತವಾಗಿತ್ತು. ಒಬ್ಬ ವಿರೋಧಿ ಬ್ರಾಹ್ಮಣನು ಇದನ್ನು ಕೇಳಿ, ಸಾರಿಪುತ್ತನ ಸಹನೆಯನ್ನು ಪರೀಕ್ಷಿಸಲು ಅವನ ಬೆನ್ನಿನ ಮೇಲೆ ಬಲವಾಗಿ ಗುದ್ದಿದ. ಇದರಿಂದ ಸಾರಿಪುತ್ತ ಕೋಪಗೊಳ್ಳಲೇ ಇಲ್ಲ. ಸಾರಿಪುತ್ತನಿಗೆ ಅಗಾಧವಾದ ಸಹನೆಯಿದೆ ಎಂಬುದನ್ನು ಬ್ರಾಹ್ಮಣನು ಮನಗಂಡನು. ಅವನ ಪದತಲದಲ್ಲಿ ಕುಳಿತು, ವಿನಮ್ರತೆಯಿಂದ ತನ್ನ ಮನೆಗೆ ಬಂದು ಆತಿಥ್ಯ ಸ್ವೀಕರಿಸಬೇಕೆಂದು ಸಾರಿಪುತ್ತನನ್ನು ಆಹ್ವಾನಿಸಿದನು.

ಸಾರಿಪುತ್ತನು ಆಹ್ವಾನವನ್ನು ಸ್ವೀಕರಿಸಿ, ಅವನ ಮನೆಗೆ ಹೋಗಿ ಆತಿಥ್ಯ ಸ್ವೀಕರಿಸಿದನು. ತನ್ನ ಮೇಲೆ ಹಲ್ಲೆ ಮಾಡಿದವನ ಮೇಲೆ ಕೋಪಗೊಳ್ಳುವ ಬದಲು ಸಾರಿಪುತ್ತನು ಅವನ ಕೋರಿಕೆಯನ್ನು ಮನ್ನಿಸಿ ಅನುಕಂಪ ತುಂಬಿದ ಮನಸ್ಸಿನಿಂದ ಅವನ ಮನೆಗೆ ಹೋಗಿ ಭಿಕ್ಷೆ ಸ್ವೀಕರಿಸಿದ. ಇದನ್ನು ಕಂಡು ಜನರು ಬೆರಗಾದರು.

### (11) ಅಂಬತ್ಥ ಮಾಣವನ ನಿಂದನೆ

ಅಂಬತ್ಥ ಮಾಣವನು ಬುದ್ಧರು ಉಳಿದುಕೊಂಡಿದ್ದ ಸ್ಥಳಕ್ಕೆ ಹೋಗಿ, "ಗೌತಮ ಬುದ್ಧ ಮತ್ತು ಅವನ ಶಿಷ್ಯರು ಸಚ್ಚಾರಿತ್ರ್ಯದವರಲ್ಲ" ಎಂದು ಮೂದಲಿಸಿದ. "ಶಾಕ್ಯ ಕುಲದವರು ಕ್ರೂರಿಗಳು ಮತ್ತು ದುಡುಕಿನ ಸ್ವಭಾವದವರು. ಅವರು ಬ್ರಾಹ್ಮಣರನ್ನು ಗೌರವಿಸುವುದಿಲ್ಲ, ಬ್ರಾಹ್ಮಣರಿಗೆ ನಮಸ್ಕರಿಸುವುದಿಲ್ಲ. ಆದ್ದರಿಂದ ಅವರು ಪಾಪಿಷ್ಟರು" ಎಂದು ಇಡೀ ಶಾಕ್ಯ ಕುಲವನ್ನೇ ನಿಂದಿಸಿದ. ಇದಾದ ನಂತರ ಯಾರನ್ನು ಗೌರವಿಸಬೇಕು ಮತ್ತು ಯಾರನ್ನು ಪಾಪಿಷ್ಟರೆಂದು ಪರಿಗಣಿಸಬೇಕು ಎಂಬುದನ್ನು ಬಹಳ ಶಾಂತಿಯಿಂದ ಬುದ್ಧ ಅವನಿಗೆ ವಿವರಿಸಿದರು. ಇದನ್ನು ಕೇಳಿದ ಅಂಬತ್ಥನು ಮೌನಿಯಾದ ಮತ್ತು ವಿನಮ್ರನಾದ.

### (12) ಮಾಗಂಡಿಯಳ ನಿಂದನೆ

'ಮಾಗಂಡಿಯ'ನ ಮಗಳು 'ಮಾಗಂಡಿಯ' ಬಹಳ ಸುಂದರವಾಗಿದ್ದಳು. ಅವಳ ತಂದೆಯು ಅವಳಿಗೆ ಅನುರೂಪನಾದ ವರನನ್ನು ಹುಡುಕುತ್ತಿದ್ದ. ಬುದ್ಧರ ಹೋಲಿಕೆ ಮಾಡಲಾಗದ ಸೌಂದರ್ಯವನ್ನು ಕಂಡ ಅವನು ಪ್ರಭಾವಿತನಾದ. ಇವನೇ ನನ್ನ ಮಗಳಿಗೆ ಸರಿಯಾದ ವರ ಎಂದು ನಿರ್ಧರಿಸಿದ. ಅವನು ತನ್ನ ಹೆಂಡತಿ ಮತ್ತು ಮಗಳನ್ನು ಕರೆದ. ಮಾಗಂಡಿಯ ಬ್ರಾಹ್ಮಣನು ತನ್ನ ಮಗಳನ್ನು ಮದುವೆಯಾಗುವಂತೆ ಬುದ್ಧರನ್ನು ಕೋರಿದ. ಬುದ್ಧರು ಆ ಕೋರಿಕೆಯನ್ನು ಕೂಡಲೇ ತಿರಸ್ಕರಿಸಿದರು. ಬ್ರಾಹ್ಮಣನು ತನ್ನ ಮಗಳ ಸೌಂದರ್ಯವನ್ನು ಬಣ್ಣಿಸಿದಾಗ, "ಅವಳನ್ನು ನಾನು ಹೆಂಡತಿಯಾಗಿ ಸ್ವೀಕರಿಸಲು ಹೇಗೆ ಸಾಧ್ಯ? ಅವಳನ್ನು ನನ್ನ ಕಾಲಿನಿಂದಲೂ ಮುಟ್ಟಲು ಸಾಧ್ಯವಿಲ್ಲ" ಎಂದು ಬುದ್ಧ ಹೇಳಿದರು. ನಂತರ ಅತ್ಯುನ್ನತ ಜ್ಞಾನೋದಯದ ಸತ್ಯವನ್ನು ವಿವರಿಸಿದರು. ಇದನ್ನು ಕೇಳಿದ ಮೇಲೆ ಮಾಗಂಡಿಯ ಮತ್ತು ಅವನ ಹೆಂಡತಿ ಬುದ್ಧರಿಗೆ ಶರಣಾದರು ಮತ್ತು ಪರಿಪೂರ್ಣ ಮುಕ್ತಿ ಪಡೆದರು.

ಮಾಗಂಡಿಯ ಮದುವೆ ಪ್ರಸ್ತಾಪವನ್ನು ಬುದ್ಧ ತಿರಸ್ಕರಿಸಿದ್ದು, ಮಾಗಂಡಿಯಳಿಗೆ ತೀವ್ರ ನೋವುಂಟು ಮಾಡಿತು. ಅವಳ ಸೌಂದರ್ಯಕ್ಕೆ

ಮೆಚ್ಚಿ ಕೋಸಂಬಿಯ ರಾಜ, ಉದಯನ್, ಆಕೆಯನ್ನು ಮದುವೆಯಾದ. ಅವಳು ರಾಣಿಯಾದಳು. ಆದರೆ ಅವಳ ಮದುವೆಯ ಕೋರಿಕೆಯನ್ನು ಬುದ್ಧ ತಿರಸ್ಕರಿಸಿದ್ದರಿಂದ ಆದ ನೋವನ್ನು ಮರೆಯಲು ಅವಳಿಗೆ ಸಾಧ್ಯವಾಗಲಿಲ್ಲ.

ಒಂದು ಸಾರಿ ಗೌತಮ ಬುದ್ಧರು ಆನಂದನ ಜೊತೆ ಆ ಪಟ್ಟಣಕ್ಕೆ ಬಂದರು. ಅವರನ್ನು ನೋಡಿದಾಗ, ಅವಳು ಅವಳ ಸೇವಕರು ಮತ್ತು ಕೆಲಸಗಾರರನ್ನು ಕರೆದು "ಬುದ್ಧನನ್ನು ಅನುಸರಿಸಿ ಹೋಗಿ ಅವನನ್ನು, ಶ್ರಮಣ ಗೌತಮ, ನೀನೊಬ್ಬ ಕಳ್ಳ, ಮೂರ್ಖ, ನಾಚಿಕೆಗೆಟ್ಟವನು, ಒಂಟೆ, ಎತ್ತು, ಕತ್ತೆ, ಒಂದು ಪ್ರಾಣಿ. ನರಕದ ದಾರಿಯಲ್ಲಿರುವ ಒಂದು ಜಂತು! ನೀನು ಸಂತೋಷದ ಅಮರತ್ವ ಪಡೆಯುವುದಿಲ್ಲ. ದುರಂತ ಸ್ಥಿತಿ ಮಾತ್ರ ನಿನಗೆ ಕಾದಿದೆ! ಎಂದು ಮೂದಲಿಸಿ ಅವಮಾನಿಸಿ" ಎಂದು ಆಜ್ಞಾಪಿಸಿದಳು.

ಇಂತಹ ಅನುಚಿತ ಮಾತುಗಳಿಂದ ಬುದ್ಧರನ್ನು ಅವರು ಅವಮಾನಿಸಿದರು. ಆಗ ಪೂಜ್ಯ ಆನಂದ ಅವರು, 'ಭಂತೇ ಈ ಅನಾಗರಿಕ ಜನರು ಕೆಟ್ಟ ಮಾತುಗಳಿಂದ ನಿಮ್ಮನ್ನು ಬೈದು ಅವಮಾನಿಸುತ್ತಿದ್ದಾರೆ. 'ನಾವು ಬೇರೊಂದು ಪಟ್ಟಣಕ್ಕೆ ಏಕೆ ಹೋಗಬಾರದು?' ಎಂದು ಬುದ್ಧರಿಗೆ ಸಲಹೆ ಕೊಟ್ಟರು. "ಆ ಪಟ್ಟಣದ ಜನರೂ ನಮ್ಮನ್ನು ಹೀಯಾಳಿಸಿದರೆ, ಆಗ ಎಲ್ಲಿಗೆ ಹೋಗೋಣ" ಎಂದು ಬುದ್ಧರು ಕೇಳಿದರು.

ಬುದ್ಧರು ಮುಂದುವರಿದು ಈ ರೀತಿ ವಿವರಿಸಿದರು – "ಆನಂದ, ನಾನು ಯುದ್ಧದಲ್ಲಿ ಹೋರಾಡುತ್ತಿರುವ ಒಂದು ಆನೆಯಂತೆ. ನಾಲ್ಕೂ ದಿಕ್ಕುಗಳಿಂದ ಬರುವ ಬಾಣಗಳನ್ನು ಆ ಆನೆಯು ತಾಳಿಕೊಳ್ಳುವಂತೆ, ಅನೇಕ ಅನೈತಿಕ ಜನರು ಆಡುವ ಮೂದಲಿಕೆಯ ಮಾತುಗಳನ್ನು ತಾಳಿಕೊಳ್ಳುವುದು ನನ್ನ ಕರ್ತವ್ಯ. ಹೊಗಳಿಕೆ ಇದ್ದಂತೆಯೇ, ತೆಗಳಿಕೆಯೂ ಇರುತ್ತದೆ. ಎರಡೂ ಸ್ಥಿತಿಗಳಲ್ಲಿ ಸಮ ಚಿತ್ತತೆಯಿಂದಿರುವುದೇ ನಿಜವಾದ ಧರ್ಮ."

ತನ್ನ ಜೀವಿತಾವಧಿಯಲ್ಲಿ, ಅನೇಕ ಸಂದರ್ಭಗಳಲ್ಲಿ ವಿವಿಧ ರೀತಿಯಾಗಿ ಬುದ್ಧರನ್ನು ನಿಂದಿಸಲಾಯಿತು. ಆದರೆ ಅವರು 'ಬುದ್ಧ'. ಇಂತಹ ತೆಗಳಿಕೆಗಳಿಂದ ಅವರು ಹೇಗೆ ವಿಚಲಿತರಾಗಲು ಸಾಧ್ಯ? ಅವರ ಸಹನೆಯು ಹಿಮಾಲಯ ಪರ್ವತದಷ್ಟೇ ಅಚಲವಾದದ್ದು. ತನ್ನನ್ನು ತೆಗಳಿದವರ ಬಗ್ಗೆ ಕೇವಲ ಪ್ರೀತಿ ತುಂಬಿದ ಕರುಣೆ ಅವರ ಹೃದಯದಿಂದ ಪ್ರವಹಿಸುತ್ತಿತ್ತು. ಅವರ ಪ್ರೀತಿ ತುಂಬಿದ ಕರುಣೆಯು ಅಗಾಧವಾದ ಸಾಗರದಂತೆ.

ಬಹುತೇಕ ಟೀಕೆಗಳು ಅವರ ಪ್ರಸಿದ್ಧಿಯನ್ನು ಸಹಿಸಲಾರದವರಿಂದ ಮತ್ತು ಅವರ ಬೋಧನೆಗಳು ಹರಡುವುದನ್ನು ಇಷ್ಟಪಡದವರಿಂದ ಬಂದಂತಹವು. ಯಾವುದೇ ರೀತಿಯಿಂದಲಾದರೂ ಸರಿ ಬುದ್ಧರ ಹೆಸರನ್ನು ಕೆಡಿಸುವುದು, ಆ ಮುಖೇನ ಅವರ ಬೋಧನೆಗಳು ಹರಡದಂತೆ ತಡೆಯುವುದು ಅವರ ಉದ್ದೇಶವಾಗಿತ್ತು.

ಈ ಎಲ್ಲಾ ಜನಗಳಲ್ಲದೆ, ದೇವದತ್ತನೂ ಸಹ ಬಹಳ ಕಟುವಾಗಿ ಬುದ್ಧರನ್ನು ಟೀಕಿಸುತ್ತಿದ್ದ. ಏಕೆಂದರೆ ಬುದ್ಧರ ಗೌರವಾನ್ವಿತ ಜಾಗವನ್ನು ಆಕ್ರಮಿಸಿಕೊಳ್ಳಲು ಅವನು ತವಕಿಸುತ್ತಿದ್ದ. ಆದರೆ ಬುದ್ಧ, ಅವನ ಬಗ್ಗೆ ಕೇವಲ ಪ್ರೀತಿ ತುಂಬಿದ ಕರುಣೆಯನ್ನು ಹೊಂದಿದ್ದರು. ಒಂದು ಸಾರಿ ದೇವದತ್ತನು ಬುದ್ಧ ಮತ್ತು ಅವರ ಬೋಧನೆಗಳ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡಿ, ಸಂಘದ 500 ಭಿಕ್ಖುಗಳನ್ನು ನಂಬಿಸಿ, ತನ್ನ ಮೋಸದ ಪ್ರಭುತ್ವವನ್ನು ಸ್ಥಾಪಿಸಿದ್ದ. ಸಂಘದಲ್ಲಿ ಒಡಕುಂಟುಮಾಡಿ ಹೊಸ ಸಂಘವನ್ನು ಸ್ಥಾಪಿಸುವ ಆಸೆ ಹೊಂದಿದ್ದ. ಆದರೆ ಅವನ ಕುತಂತ್ರದಲ್ಲಿ ಅವನು ಯಶಸ್ವಿಯಾಗಲಿಲ್ಲ.

ಆಗ ಅವನಿಗೆ ಒಂದು ಆಲೋಚನೆ ಬಂದಿತು. ಈ ದೇಶದ ರಾಜ ಬುದ್ಧನ ಬಹುದೊಡ್ಡ ಭಕ್ತ. ಈ ರಾಜ ಬದುಕಿರುವ ತನಕ, ನಾನು ಎಷ್ಟೇ ಪ್ರಯತ್ನ ಮಾಡಿದರೂ ಬುದ್ಧನ ಹೆಸರು ಮತ್ತು ಪ್ರಸಿದ್ಧಿಯನ್ನು ಕೆಡಿಸಲು ಸಾಧ್ಯವಿಲ್ಲ. ಆದ್ದರಿಂದ ನಾನು, ರಾಜಕುಮಾರ ಅಜಾಶತ್ರುವನ್ನು ನನ್ನ ಕೈವಶಮಾಡಿಕೊಂಡು ಅವನ ಮುಖಾಂತರ ನನ್ನ ಬಯಕೆಯನ್ನು ಈಡೇರಿಸಿಕೊಳ್ಳಬೇಕು ಎಂಬ ಕೆಟ್ಟ ಆಲೋಚನೆ ದೇವದತ್ತನಿಗೆ ಬಂದಿತು.

ಅವನು ತನ್ನ ಆಲೋಚನೆಯನ್ನು ಕಾರ್ಯಗತ ಮಾಡಿದ. ಕೆಲವು ಪವಾಡಗಳನ್ನು ಮಾಡಿ ಅಜಾತಶತ್ರುವಿನ ಮೇಲೆ ಗಾಢವಾದ ಪ್ರಭಾವ ಬೀರಿದ. ನಂತರ, "ನೋಡು ನಿನ್ನ ತಂದೆ, ಬಿಂಬಸಾರ, ಬಹಳ ಕಾಲ ಬದುಕುತ್ತಾನೆ. ಅವನು ಬದುಕಿರುವವರೆಗೆ ನೀನು ರಾಜನಾಗಿ, ರಾಜ್ಯಾಧಿಕಾರ ಅನುಭವಿಸಲು ಸಾಧ್ಯವಿಲ್ಲ. ಆದ್ದರಿಂದ ಅವನನ್ನು ಕೊಂದು ಸಿಂಹಾಸನವನ್ನು ಆಕ್ರಮಿಸಿಕೊ" ಎಂದು ವಿವರಿಸಿದ.

ತನ್ನ ಸ್ವಂತ ತಂದೆ, ರಾಜ ಬಿಂಬಸಾರನನ್ನು ಕೊಲ್ಲುವಂತೆ ಅಜಾತಶತ್ರುವನ್ನು ಪ್ರಚೋದಿಸಲಾಯಿತು. ಆದರೆ ಅವನು ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ತನ್ನ ಮಗನಿಗೆ ಸಿಂಹಾಸನದ ಮೇಲೆ ಕೂರುವ ಉತ್ಕಟ ಆಕಾಂಕ್ಷೆಯಿದೆ ಎಂಬುದನ್ನು ತಿಳಿದ ರಾಜನು ತನ್ನ ಮಗನ ಬಗ್ಗೆ ಅನುಕಂಪ ತೋರಿದ. ಸಂತೋಷದಿಂದ ಸಿಂಹಾಸನವನ್ನು ಬಿಟ್ಟುಕೊಟ್ಟು ಅವನನ್ನು ದೇಶದ ರಾಜನನ್ನಾಗಿ ಮಾಡಿದ.

ಇದರಿಂದಲೂ ದೇವದತ್ತನಿಗೆ ತೃಪ್ತಿಯಾಗಲಿಲ್ಲ. ಏಕೆಂದರೆ, ಬಿಂಬಸಾರ ರಾಜನಲ್ಲದಿದ್ದರೂ, ಪ್ರಜೆಗಳು ಅವನಲ್ಲಿ ಅಪಾರ ನಂಬಿಕೆಯಿಟ್ಟಿದ್ದರು. ಅವನನ್ನು ಕೊಲ್ಲಲು ಅಜಾತಶತ್ರುವಿಗೆ ಸಾಧ್ಯವಾಗದಿದ್ದರೂ, ಸುಳ್ಳು ಆಪಾದನೆ ಹೊರಿಸಿ ಅವನನ್ನು ಜೈಲಿಗೆ ತಳ್ಳಿ, ಊಟ ಕೊಡದೆ ಹಸಿವಿನಿಂದ ಸಾಯಿಸಿದ.

ದೇವದತ್ತನಿಗೆ ಮಹದಾನಂದವಾಯಿತು. ಈಗ ನನ್ನ ಶಿಷ್ಯನೇ ರಾಜನಾಗಿರಬೇಕಾದರೆ ನಾನೇಕೆ ಹೆದರಬೇಕು? ಹಾಗಾಗಿ ಬುದ್ಧರನ್ನು ಕೊಲ್ಲಲು ಅನೇಕ ಪ್ರಯತ್ನಗಳನ್ನು ಮಾಡಿದ. ಆದರೆ ಪ್ರತಿಬಾರಿಯೂ ವಿಫಲನಾದ. ಅವನ ದುಷ್ಕೃತ್ಯಗಳ ಬಗ್ಗೆ ಬುದ್ಧರು ಹಿಮಾಲಯದಂತೆ ನಿಶ್ಚಲರಾಗಿದ್ದರು. ಅವನ ಬಗ್ಗೆ ಅವರ ಪ್ರೀತಿ ತುಂಬಿದ ಕರುಣೆ ಆಳವಾಗಿತ್ತು ಮತ್ತು ಗಾಢವಾಗಿತ್ತು.

ಈ ಘಟನೆಗಳು, ಬುದ್ಧರ ಎರಡು ಗುಣಗಳಿಗೆ ಸ್ಪಷ್ಟ ಉದಾಹರಣೆಗಳಾಗಿವೆ.

ಒಂದು ಸಾರಿ ದೇವದತ್ತನು ತನ್ನ ಸೇವಕರ ಸಹಾಯದಿಂದ ನಲಗಿರಿ ಎಂಬ ಸೊಕ್ಕಿದ ಆನೆಗೆ ಮದ್ಯ ಕುಡಿಸಿದ. ಅದು ಘೋರವಾಗಿ ಘೀಳಿಡುತ್ತಿತ್ತು. ನಂತರ ಅದನ್ನು ಬುದ್ಧರು ಭಿಕ್ಷೆಗೆ ಹೋಗುತ್ತಿದ್ದ ದಾರಿಗೆ ಅಡ್ಡಲಾಗಿ ಬಿಡಲಾಯಿತು. ಜೊತೆಗಿದ್ದ ಭಿಕ್ಖುಗಳು ಹತ್ತಿರವಿರುವ ಮನೆಯಲ್ಲಿ ರಕ್ಷಣೆ ಪಡೆಯುವಂತೆ ಬುದ್ಧರನ್ನು ಬೇಡಿಕೊಂಡರು. ಬುದ್ಧ ವಿಚಲಿತರಾಗಲಿಲ್ಲ. ಘೀಳಿಡುತ್ತಿದ್ದ ಆನೆ ಅವರ ಹತ್ತಿರ ಹತ್ತಿರ ಬರುತ್ತಿತ್ತು. ಬುದ್ಧ ಆನೆಯ ಮೇಲೆ ಮೈತ್ರಿಯ ತರಂಗಗಳ ಮಳೆಗರೆದರು. ಅದರ ಫಲವಾಗಿ ಆನೆಯ ಕೋಪ ಕಡಿಮೆಯಾಯಿತು. ಅಷ್ಟೇ ಅಲ್ಲ ಬುದ್ಧರ ಹತ್ತಿರ ಬಂದು ಮಂಡಿಯೂರಿ ಅವರಿಗೆ ನಮಸ್ಕರಿಸಿತು. ಅನಂತ ಮೈತ್ರಿ ಮತ್ತು ಕರುಣೆಯಿಂದ ಬುದ್ಧ ಅದರ ಸೊಂಡಿಲನ್ನು ನೇವರಿಸಿದರು. ನಲಗಿರಿಯ ಹೃದಯ ಸಂತೋಷದಿಂದ ತುಂಬಿತು. ಹಿಂದಿರುಗುವಾಗ ಅದು ಬುದ್ಧರಿಗೆ ಬೆನ್ನು ಮಾಡದೆ, ಬುದ್ಧರ ಮುಖವನ್ನೇ ನೋಡುತ್ತಾ ಹಿಮ್ಮುಖವಾಗಿ ನಡೆದು ಹೋಯಿತು.

ಬುದ್ಧರ ಸಹನೆ ಅಷ್ಟು ಅಚಲವಾದದ್ದು ಮತ್ತು ಅವರ ಪ್ರೀತಿ ತುಂಬಿದ ಕರುಣೆ ಅಷ್ಟು ಗಾಢವಾದದ್ದು.

ಮೇಲೆ ಹೇಳಿದ ಬುದ್ಧರ ಜೀವನದ ಘಟನೆಗಳಿಂದ ನಾವು ಪಾಠ ಕಲಿಯಬೇಕು ಮತ್ತು ಪ್ರೇರಣೆ ಪಡೆಯಬೇಕು. ಯಾರಾದರೂ ನಮ್ಮನ್ನು ಟೀಕಿಸಿದರೆ ಮತ್ತು ಅದರಲ್ಲಿ ಸತ್ಯಾಂಶವಿದ್ದರೆ, ತಕ್ಷಣವೇ ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಟೀಕೆಯಲ್ಲಿ ಸತ್ಯಾಂಶವಿಲ್ಲದಿದ್ದರೆ, ಟೀಕೆಯು ಕಟುವಾಗಿದ್ದರೂ ನಾವು ಅಚಲರಾಗಿರಬೇಕು ಮತ್ತು ಟೀಕಾಕಾರರ ಬಗ್ಗೆ ಅನಂತ ಮೈತ್ರಿಯನ್ನು ಬೆಳಸಿಕೊಳ್ಳಬೇಕು.

ತನ್ನ ಸ್ಥಾನ ಉಳಿಸಿಕೊಳ್ಳಲು ಅಥವಾ ತನಗೆ ಸಿಗದೇ ಇರುವ ಸ್ಥಾನವನ್ನು ಪಡೆದುಕೊಳ್ಳಲು ದೇವದತ್ತನು ಏನಾದರೂ ಕುತಂತ್ರ ಮಾಡಿದರೆ, ಇಂದಿನ ಮತ್ತು ಮುಂದಿನ ಧರ್ಮದ ಆಚಾರ್ಯರುಗಳು ಗೊಂದಲಗೊಳ್ಳಬಾರದು, ಅಚಲರಾಗಿರಬೇಕು. ಧ್ಯಾನ ಸಾಧಕರೂ ಸಹ ವಿಚಲಿತರಾಗಬಾರದು. ರಾಜ್ಯಾಧಿಕಾರಕ್ಕೆ ಹೆದರಬಾರದು ಅಥವಾ ಶ್ರೀಮಂತ ವ್ಯಕ್ತಿಯ ಪ್ರಭಾವಕ್ಕೊಳಗಾಗಿ ದಾರಿತಪ್ಪಬಾರದು. ಅವನ ಬಗ್ಗೆ ಸಹನೆಯಿಂದಿರಿ, ಅವನ ಬಗ್ಗೆ ಪ್ರೀತಿ ತುಂಬಿದ ಕರುಣೆಯಿಂದಿರಿ.

ಇದು ಧರ್ಮ ಸಂದೇಶ. ಇದನ್ನು ಮಾಡಬೇಕು. ಇದರಲ್ಲಿಯೇ ಎಲ್ಲರ ಸಂತೋಷವಿದೆ! ಇದರಲ್ಲಿಯೇ ಎಲ್ಲರ ಕಲ್ಯಾಣವಿದೆ!!

**RNI. No. : KARKAN/2015/68727. Postal Regn. No.: RNP/KA/BGS/2253/2017-19**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30. Pages-4.**

**ಪ್ರಶ್ನೆ:** ದಯವಿಟ್ಟು ಹೇಳಿ, ವಿಪಶ್ಯನ ಧ್ಯಾನದ ಅಭ್ಯಾಸದಿಂದ ಯಾವ ರೀತಿಯ ಬದಲಾವಣೆಗಳನ್ನು ನಾವು ನಿರೀಕ್ಷಿಸಬಹುದು.

**ಗೋಯಂಕಾಜಿ:** ಈ ಬದಲಾವಣೆಯನ್ನು ನೀವು ಸ್ವತಃ ಅನುಭವಿಸಬೇಕು. ಅದಕ್ಕಾಗಿಯೇ ನಾವು ನಿಮ್ಮ ಹತ್ತು ದಿನಗಳ ಸಮಯ ಕೇಳುತ್ತೇವೆ. ನಿಮಗೆ ಏನನ್ನು ವಿವರಿಸಲು ನಾವು ಪ್ರಯತ್ನಿಸುತ್ತೇವೆಯೋ, ಅದನ್ನು ನಾವು ಕಲಿಸುತ್ತೇವೆ. ನೀವು ಏನನ್ನಾದರೂ ಗಳಿಸಿಕೊಳ್ಳಬೇಕೆಂದರೆ, ಏನನ್ನಾದರೂ ನೀವು ಕೊಡಲೇಬೇಕು. ಈ ಪ್ರವಚನಗಳು ನಿಮಗೆ ಹೆಚ್ಚಿನದನ್ನು ಹೇಳುವುದಿಲ್ಲ. ನಾವು ಏನನ್ನು ಹೇಳುತ್ತಿದ್ದೇವೆಯೋ ಅದನ್ನು ನೀವೇ ಸ್ವತಃ ಅನುಭವಿಸಬೇಕು. ವಿಪಶ್ಯನ ಧ್ಯಾನವು ನಿಜವಾಗಿಯೂ ಮಲಿನತೆಗಳನ್ನು ಹೋಗಲಾಡಿಸಲು ಸಹಾಯ ಮಾಡುತ್ತದೆಯೋ ಇಲ್ಲವೋ ಎಂಬುದನ್ನು ನೋಡಲು ನೀವು ವಿಪಶ್ಯನ ಧ್ಯಾನ ಶಿಬಿರಕ್ಕೆ ಬರಬೇಕು. ಅದಕ್ಕೆ ಈ ಉಪನ್ಯಾಸವು ನಿಮಗೆ ಸ್ಫೂರ್ತಿ ನೀಡಲಿ. ಈ ಅನುಭವವು ನಿಮಗೆ ತುಂಬಾ ಹಿತಕರವಾಗಿರುತ್ತದೆ ಮತ್ತು ನಿಮ್ಮ ಜೀವನದಲ್ಲಿ ಉತ್ತಮ ಬದಲಾವಣೆಗಳು ಬರಲು ಪ್ರಾರಂಭಿಸುತ್ತವೆ.

**ಪ್ರಶ್ನೆ:** ಅತ್ಯಲ್ಪ ಕಾಲದಲ್ಲಿ ತಯಾರಾಗುವ ಆಹಾರದಂತೆ, ಅತ್ಯಲ್ಪ ಕಾಲದಲ್ಲಿ ನೀವು ವಿಪಶ್ಯನ ಬೋಧಿಸಲು ಆಗುವುದಿಲ್ಲವೆ?

**ಗೋಯಂಕಾಜಿ:** ಓಕೆ, ಈಗಿಂದೀಗಲೇ ಸುಮ್ಮನೆ ನಂಬಿ 'ನಾನು ಒಬ್ಬ ವಿಪಶ್ಯನ ಧ್ಯಾನ ಸಾಧಕ' ಎಂದು. ಆದರೆ ಅದು ಸಹಾಯ ಮಾಡುತ್ತದೆಯೇ? ವಿಪಶ್ಯನ ಧ್ಯಾನದ ಮೂಲಕ ತನ್ನನ್ನು ತಾನು ಅರ್ಥಮಾಡಿಕೊಳ್ಳಲು ನಿಜವಾಗಿಯೂ ಸಮಯ ಹಿಡಿಯುತ್ತದೆ. ಅತ್ಯಲ್ಪ ಕಾಲದಲ್ಲಿ ಅದನ್ನು ಕಲಿಯಲು ಆಗುವುದಿಲ್ಲ. ವಾಸ್ತವವಾಗಿ ನೀವು ವಿಪಶ್ಯನ ಧ್ಯಾನ ಶಿಬಿರಕ್ಕೆ ಬರುವ ನಿರ್ಧಾರವನ್ನು ತಕ್ಷಣ ಕೈಗೊಂಡರೆ ಉತ್ತಮವಾಗುತ್ತದೆ.

**10 ದಿನದ ಶಿಬಿರ ಆಯೋಜಿಸುವವರು ಮತ್ತು ಮಕ್ಕಳಿಗೆ 70ನಿಮಿಷದ ಆನಾಪಾನಾ ಧ್ಯಾನ ಶಿಬಿರ ವ್ಯವಸ್ಥೆ ಮಾಡುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

**ಕರ್ನಾಟಕದ ಶಾಲೆಗಳಲ್ಲಿ ಮಕ್ಕಳ ಶಿಬಿರಗಳು :** ಶಾಲೆಗಳಲ್ಲಿ ಮಕ್ಕಳಿಗಾಗಿ ಇಂಗ್ಲೀಷ್ ಮತ್ತು ಕನ್ನಡ ಭಾಷೆಯಲ್ಲಿ 70 ನಿಮಿಷದ ಆನಾಪಾನ ಧ್ಯಾನವನ್ನು ಹೇಳಿಕೊಡಲಾಗುತ್ತದೆ. ಸಂಪರ್ಕ ಸಂಖ್ಯೆಗಳು: 9880421155 / 9480581708 / 8762086089

## ಇತರೆ ಸ್ಥಳಗಳಲ್ಲಿ ಒಂದು ದಿನದ ಶಿಬಿರಗಳು

**ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 7829912733, 9060300558, 880519658. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ತಿಂಗಳು ಕೊನೆ ಭಾನುವಾರ. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506, **ಲೋಕಾಪುರ(ಬಾಗಲಕೋಟೆ):** ಮೊದಲ ಅಥವಾ ಎರಡನೇ ಭಾನುವಾರ ಸಂಪರ್ಕಿಸಿ: 9741275657

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು: 2018** ಫೆಬ್ರವರಿ 28–11 ಮಾರ್ಚ್, 14–25, 4–15 ಏಪ್ರಿಲ್, 2–13 30ಮೇ–10ಜೂನ್, 13–24 ಜೂನ್, 27–8 ಜುಲೈ,11–22 ಜುಲೈ, 25–5 ಆಗಸ್ಟ್, 8–19, ಸೆಪ್ಟಂಬರ 1–12, 19–30.ಅಕ್ಟೋಬರ್ 10–21, 24–4 ನವೆಂಬರ್ 19–17, 21–2 ಡಿಸೆಂಬರ್ 5–16, 19–30. **ಮೂರು ದಿನದ ಶಿಬಿರ:** ಮಾರ್ಚ್ 29 ರಿಂದ ಏಪ್ರಿಲ್ 1. **ಎರಡು ದಿನದ ಶಿಬಿರ:** 25–27ಮೇ, 14–16ಸೆಪ್ಟಂಬರ್, 6–8ಅಕ್ಟೋಬರ್. **ಟೀನೇಜರ್ಸ್ ಕೋರ್ಸ್** (ವಯಸ್ಸು 15–19ವರ್ಷ)ಹೆಣ್ಣುಮಕ್ಕಳಿಗೆ ಮಾತ್ರ, ಮೇ16–24.**ಸತಿಪಠ್ಠಾನ ಶಿಬಿರಗಳು:** 18–27 ಏಪ್ರಿಲ್, 22–30 ಆಗಸ್ಟ್, **ಒಂದು ದಿನದ ಶಿಬಿರ:** ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ ಸಾಯಂಕಾಲ 4 ಗಂಟೆ. **ಮಕ್ಕಳ ಶಿಬಿರ:** ಪ್ರತಿ ತಿಂಗಳು ಯಾವುದಾದರೂ ಒಂದು ಭಾನುವಾರ. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ಮೊಬೈಲ್: 7829912733, 8861644284, 9972588377,
ಇ–ಮೇಲ್:info@paphulla.dhamma.org;
website: www.dhamma.org.

## ವಾರದ ಒಂದು ಗಂಟೆಯ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ

**ಬೆಂಗಳೂರು: ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593. **ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.

**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447

**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ:**
**http://www.paphulla.dhamma.org/os/paphulla sittings.htm**

**ದಾವಣಗೆರೆ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6 ಸಂಪರ್ಕಿಸಿ: 9448588789, 9844245111, 9986962762. **ಬಳ್ಳಾರಿ:** ಪ್ರತಿ ಗುರುವಾರ ಸಾಯಂಕಾಲ 6 ರಿಂದ 7, ಸಂಪರ್ಕಿಸಿ: 9986677012, **ಬೀದರ್:** ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 10 ಸಂಪರ್ಕಿಸಿ: 9480240088, 9449556529, **ಧಾರವಾಡ:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9035032422, 9483483437, 7406934095, **ಬೆಳಗಾವಿ:** ಪ್ರತಿ ಭಾನುವಾರ ಬೆಳಿಗ್ಗೆ 7 ಇಂದ 8 ಸಂಪರ್ಕಿಸಿ: 9483285511, 9448591755, **ತೀರ್ಥಹಳ್ಳಿ:** ಪ್ರತಿ ಭಾನುವಾರ ಬೆಳಿಗ್ಗೆ 10.30 ರಿಂದ 11.30 ಸಂಪರ್ಕಿಸಿ: 9448814196, **ಮಂಗಳೂರು:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9900736473

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ–ಅಂಚೆ

ಗೆ,

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.